<u>ಸಾಕ್ಷಿಯನ್ನು ದಿಃ**24.01.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಸಿ.ಎಲ್.ವಿ. ವಕೀಲರಿಂದ:</u>

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗ ಕನ್ನಡ ಓದಲು ಬರುವುದಿಲ್ಲ. ಆದರೆ ಸಹಿ ಮಾತ್ರ ಮಾಡುತ್ತೇನೆ . ನಾನು ಮತ್ತು ಪ್ರತಿವಾದಿ ಒಂದೇ ಊರಿನವರು. ಆದರೆ ಸಂಬಂಧಿಕರಲ್ಲ. ನಮ್ಮಿಬ್ಬರ ನಡುವೆ ಈಗಲೂ ಉತ್ತಮ ಒಡನಾಟ ಇರುತ್ತದೆ. 1 ನೇ ಪ್ರತಿವಾದಿಗೆ ಸವಿತಾ ಮತ್ತು 2 ನೇ ಪ್ರತಿವಾದಿ ಮಕ್ಕಳಿರುತ್ತಾರೆ. ಸದರಿ ಈ ದಾವೆಯಲ್ಲಿ ಸವಿತಾರವರು ಪಕ್ಷಗಾರರಾಗಿರುತ್ತಾರೆ. ಸವಿತಾರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸರ್ವೇ ನಂ.7 ರ ಸಲುವಾಗಿ 1 ½ ಎಕರೆ ಜಮೀನಿನ ಸಲುವಾಗಿ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ . 1 ನೇ ಪ್ರತಿವಾದಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಾರಾಟಕ್ಕೆ ಇಟ್ಟಿರುತ್ತೇವೆ ಎಂದು 1 ನೇ ಪ್ರತಿವಾದಿಯೇ ತಿಳಿಸಿರುತ್ತಾರೆ. 2017 ರಲ್ಲಿ ತಿಳಿಸಿರುತ್ತಾರೆ. ಆದರೆ ದಿನಾಂಕ ನೆನಪಿರುವುದಿಲ್ಲ. ಕೈ ಸಾಲ ತೀರುವಳಿಗಾಗಿ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ.

ವಾದಿ 1 ನೇ ಪ್ರತಿವಾದಿಯ ತಂಗಿಯ ಮಗಳು ಇರುವುದರಿಂದ ಅವರವರೇ ಮಾತುಕತೆ ಮಾಡಿಕೊಂಡಿರುತ್ತಾರೆ. ವಾದಿಗೆ ಮಾರಾಟದ ವಿಷಯ ಯಾರು ತಿಳಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ವ್ಯಾಪಾರದ ಮಾತುಕತೆಗೆ ನಾನು ಸೇರಿರುವುದಿಲ್ಲ. ಕರಾರು ಪತ್ರಕ್ಕೆ ಸಹಿ ಹಾಕುವ ಪೂರ್ವದಲ್ಲಿ ಆದಂತಹ ಮಾತುಕತೆಗಳ ಬಗ್ಗೆ ನನಗೆ

ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಹಣ ಕೊಡುವ ಅಥವಾ ತೆಗೆದುಕೊಳ್ಳುವ ವ್ಯವಹಾರ ಆಗಿರುವುದಿಲ್ಲ. ನನ್ನ ಪ್ರಮಾಣ ಪತ್ರವನ್ನು ವಾದಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಪ್ರತಿವಾದಿ ಮತ್ತು ವಾದಿ ಸೇರಿ ಬರೆಸಿರುತ್ತಾರೆ ವಾದಿ ಕರಾರು ಪತ್ರವನ್ನು ಓದಿ ತಿಳಿದುಕೊಂಡಿರುತ್ತಾರೆ.

ದಾವಾ ಆಸ್ತಿಯಲ್ಲಿ ತೆಂಗು, ಅಡಿಕೆ ಮತ್ತು ಮನೆ ಇರುತ್ತದೆ. ತೆಂಗಿನ ಗಿಡಗಳು ಸುಮಾರು 6-7 ವರ್ಷ ಇರಬಹುದು. ಕರಾರು ಪತ್ರ ಆಗುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ತೆಂಗು, ಅಡಿಕೆ ಸಸಿಗಳು ಇದ್ದವು. ಸಾಕ್ಷಿಯು ಮುಂದುವರೆದು ವಾದಿಯ ತಂದೆ ಸಸಿಗಳನ್ನು ನೆಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರ ಆಗುವ ಪೂರ್ವದಿಂದಲೂ ವಾದಿಯ ತಂದೆ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿದ್ದರು. ನಾನು ಕರಾರು ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ . ಕರಾರು ಪತ್ರದಲ್ಲಿ ಸದರಿ ಸ್ವಾಧೀನತೆಯ ಬಗ್ಗೆ ಬರೆಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ.1 ರಲ್ಲಿ ದಾವಾ ಆಸ್ತಿಯ ಸ್ವಾಧೀನತೆಯನ್ನು ಪ್ರತಿವಾದಿರವರ ಬಳಿಯೇ ಉಳಿಸಿಕೊಂಡಿರುವುದಾಗಿ ನಮೂದಿದ್ದು ಅದರಲ್ಲಿರುವ ಮಾಹಿತಿಗಳು ಸರಿಯೋ ಅಥವಾ ಸ್ವಾಧೀನತೆ ನಿಪಿ.1 ರ ಪೂರ್ವದಲ್ಲೇ ವಾದಿಯ ತಂದೆ ಬಳಿಯೇ ಇತ್ತು ಎಂಬುದು ಸರಿಯೇ ಎಂದರೆ ಸಾಕ್ಷಿಯು ಸ್ವಾಧೀನತೆ ವಾದಿಯ ತಂದೆಯ ಬಳಿ ಇರುವುದು ಸರಿ ಎಂದು ನುಡಿಯುತ್ತಾರೆ.

ನಿಪಿ.1 ಕರಾರು ಪತ್ರದಲ್ಲಿ ವಸ್ತು ಸ್ಥಿತಿಯ ವಿರುದ್ದವಾಗಿ ಬರೆಸಿರುತ್ತಾರೆ ಎಂದು ಹೇಳುತ್ತೀರಾ ಎಂದರೆ ಸಾಕ್ಷಿಯು ನಿಪಿ.1 ರಲ್ಲಿ ಬರೆಸಿರುವ ಬಗ್ಗೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ವಾದಿಯ ತಂದೆ ತೆಂಗಿನ ಸಸಿಗಳನ್ನು ನೆಟ್ಟಿರುತ್ತಾರೆ ಎಂದು

ನಮೂದು ಇದೆಯೋ ಇಲ್ಲವೋ ನನಗೆ ನೆನಪಿಲ್ಲ. ಪ್ರತಿವಾದಿರವರು ಸಾಲಕ್ಕಾಗಿ ಮಾತ್ರ ಭದ್ರತೆಗಾಗಿ ನಿಪಿ.1 ನ್ನು ಬರೆದುಕೊಟ್ಟಿರುತ್ತಾರೆ ವಿನಹಃ ದಾವಾ ಆಸ್ತಿಯನ್ನು ಮಾರಾಟ ಮಾಡಲು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿರವರು ವಾದಿಯ ಬಳಿ ಜಮೀನಿನ ಮಾರಾಟದ ಬಗ್ಗೆ ಮಾತುಕತೆಯೇ ಮಾಡಿಲ್ಲ ಎಂದರೆ ಸರಿಯಲ್ಲ. ಮಾರಾಟದ ಉದ್ದೇಶವಾಗಿ ಪ್ರತಿವಾದಿರವರು ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೆ ಸದರಿ ವಿಚಾರ ಗೊತ್ತಿಲ್ಲದೇ ಇದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.